ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಸೋಮವಾರಪೇಟೆ
ಸಿ.ಸಿ. ನಂ. 9/2025

| | | |
|---|---|---|
| ಹೆಸರು | : ಸುಮತಿ ಕೆ ವಿ | ಪಿಡಬ್ಲ್ಯೂ-1 |
| ಗಂಡನ ಹೆಸರು | : ಪ್ರಕಾಶ್ | ಸಿಡಬ್ಲ್ಯೂ-1 |
| ವಯಸ್ಸು | : 56 ವರ್ಷ | |
| ವೃತ್ತಿ | : ಅಬಕಾರಿ ಉಪನಿರೀಕ್ಷರು | |
| ವಾಸ ಸ್ಥಳ | : ಸೋಮವಾರಪೇಟೆ | |

ದಿಃ06.03.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.
ಮುಖ್ಯ ವಿಚಾರಣೆಃ ಮಾನ್ಯ ಸ. ಸ. ಅಭಿಯೋಜಕರಿಂದ:

ದಿನಾಂಕ 27.01.2022 ರಿಂದ 22.10.2025 ರ ತನಕ ವಲಯ ಕಚೇರಿಯಲ್ಲಿ ಅಬಕಾರಿ ಹೆಚ್ಚುವರಿ ಉಪನಿರೀಕ್ಷಕರು ಆಗಿ ಕಚೇರಿಯಲ್ಲಿ ಕೆಲಸ ಮಾಡುತಿದ್ದು ಈಗ ಉಪನೀರಿಕ್ಷಕರಾಗಿ ಸೋಮವಾರಪೇಟೆ ಉಪ ವಿಭಾಗದಲ್ಲಿ ಅಬಕಾರಿ ಇಲಾಖೆ ಯಲ್ಲಿ ಕರ್ತವ್ಯ ನಿವರ್ಹಿಸಿದ್ದೇನೆ.

ಈ ಪ್ರಕರಕ್ಕೆ ಸಂಬಂದಪಟ್ಟಂತೆ ದಿಃ 01.08.2024 ರಂದು ಸೋಮವಾರಪೇಟೆ ತಲೂಕಿನ ಗೋಣಿ ಮರೂರು ಗ್ರಾಮದಲ್ಲಿ ನಮ್ಮ ಅಬಕಾರಿ ಪೇದೆಯಾದ ಚಾಸಾ 2 ರವರು ಗಸು ್ತ ತಿರುಗುತ್ತಿದ್ದಾಗ ಅಬಕಾರಿ ಪೇದೆಯವರಿಗೆ ಗೋಣಿಮರೂರಿನಲ್ಲ ಬಾತ್ಮೀದಾರರು ಹಿತ್ತಲಗದ್ದೆ ಗ್ರಾಮದ ತೀರ್ಥ ಕುಮಾರ್ ತಂದೆ ಕುಯಪ್ಪ ಎಂಬುವವರು ಅಕ್ರಮವಾಗಿ ಕಳ್ಳಬಟ್ಟಿ ತಯಾರಿಸಿಮರಾಟ ಮಾಡುತ್ತಿರುವ ಮಾಹಿತಿಯನ್ನು ನನಗೆ ಕಚೇರಿಯಲ್ಲಿದ್ದಾಗ ಸಮಯ 3.00 ಗಂಟೆಗೆ ದೂರವಾಣಿ ಮುಖಾಂತರ ತಿಳಿಸಿರುತ್ತಾರೆ. ಕೂಡಲೇ ಅಬಕಾರಿ ಉಪಧೀಶರಕರ ನೇತೃತ್ವದಲ್ಲಿ ತಕ್ಷಣವೇ ಕಚೇರಿಗೆ ಮಧ್ಯಾಹ್ನ 3.10 ಗಂಟೆ ಗೆ ಇಲಾಖಾ ವಾಹನದಲಿ ಹೊರಟು ಗೋಣಿಮರೂರು ಗ್ರಾಮದಲ್ಲಿ ಅಬಕಾರಿ ಪೇದೆಯಾದ ಚಾಸಾ 2 ರವರು ನನಗೆ ಲಿಖಿತ ದೂರನ್ನು ನೀಡಿರುತ್ತಾರೆ. ಕೂಡಲೇ ನಾವುವು ಕಾರ್ಯ ಪ್ರವೃತ್ತರಾಗಿ ಗೋಣಿಮರೂರಿನಿಂದ ಹಿತ್ತಲಗದ್ದೆಗೆ ಹ ೋಗುವ ರಸ್ತೆಯಲ್ಲಿ ಒಬ್ಬ ವ್ಯಕ್ತಿಯು ಇದ್ದು ತೀರ್ಥಕುಮಾರ್ ರವರ ವಿಳಾಸವನ್ನು ಕೇಳಲಾಗಿ ಅವರು ವಿಳಾಸವನ್ನು ತಿಳಿಸಿರುತ್ತಾರೆ ನಂತರ ಅವರನ್ನು ಪಂಚರನ್ನಾಗಿ ಬರಲು

ಕೇಳಿಕೊಂಡಾಗ ಅವರು ಬರಲು ನಿರಾಕರಿಸಿರುತ್ತಾರೆ. ನಂತರ ನಾವು ಕಾರ್ಯ ಪ್ರವೃತ್ತರಾಗಿ ತೀರ್ಥಕುಮಾರ್ ರವರ ವಿಳಾಸವನ್ನು ಅರಸಿ ಅವರ ಮನೆಯ ಮುಂಭಾಗದಲ್ಲಿ ಸರ್ಕಾರಿ ವಾಹನದಲ್ಲಿ ನಾವು ಕೆಳಗೆ ಇಳಿಯುವ ಸಂದರ್ಭದಲ್ಲಿ ನಮ್ಮ ಸಮವಸ್ತ್ರ ವನ್ನು ಕಂಡು ಒಬ್ಬ ವ್ಯಕ್ತಿಯು ಮನೆಯ ಮುಂಭಾಗದಿಂದ ಓಡಿ ಹೋಗಿರುತ್ತಾರೆ. ಚಾಸಾ 2 ಮತ್ತು 3 ರವರು ಓಡಿಹೋದ ವ್ಯಕ್ತಿಯನ್ನು ಹಿಡಿಯಲು ಪ್ರಯತ್ನಿಸಿದಾಗ ಅವರು ತೋಟದೊಳಗೆ ಹೋಗಿ ತಪ್ಪಿಸಿಕೊಂಡಿರುತ್ತಾರೆ ನಂತರ ಅನುಮಾನಾಸ್ಪದಗೊಂಡು ನಂತರ ಸ್ಥಳದಲ್ಲಿ ಶೋಧನಾ ಸಮಚ್ಚಿತ ಆಧಾರವನ್ನು ತಯಾರಿಸಿಕೊಂಡು ಮನೆಯ ಮುಂದೆ ಒಬ್ಬ ವಯಸ್ಸಾದ ವ್ಯಕ್ತಿಯು ಇದ್ದು ಅವರನ್ನು ನಾವು ಓಡಿಹೋದ ವ್ಯವಿಕ್ತಿ ಯಾರು ಎಂದು ಕೇಳಿದಾಗ ಮತ್ತು ಅವರು ಏನಾಗಬೇಕು ಎಂದು ಕೇಳಿದಾಗ ಅವರು ಈ ಮನೆಯವರು ತೀರ್ಥ ಕುವಾರ್ ಎಂದು ತಿಳಿಸಿದ್ದು ನಾನು ಅವರಿಗೆ ದೊಡ್ಡಪ್ಪ ನಾಗಬೇಕೆಂದು ತಿಳಿಸಿರುತ್ತಾರೆ. ನಂತರ ನಾವು ದೊಡ್ಡಪ್ಪನವರಿಗೆ ಬಂದ ವಿಚಾರವನ್ನು ತಿಳಿಸಿ ಮನೆಯನ್ನು ಶೋಧಿಸಲು ಸಹಕರಿಸಬೇಕೆಂದು ಕೇಳಿಕೊಂಡಾಗ ಅವರು ಸಹಕರಿಸಿರುತ್ತರೆ. ಆನಂತರ ನಾವು ಅವರ ಮನೆಯ ಒಳಗೆ ಹೋದಾಗ ಮನೆಯ ಒಳಗೆ ಎಲ್ಲಾ ರೂಮ್ ಗಳನ್ನು ಪರಿಶೀಲಿಸಿದಾಗ ಮನೆಯ ಅಡುಗೆ ಕೋಣೆಯ ಪಕ್ಕದ ಡೈನಿಂಗ್ ಹಾಲ್ ನ ಮರದ ಟೇಬಲ್ ಕೆಳಗೆ 2 ಬಿಳಿ ಬಣ್ಣದ ಪ್ಲಾಸ್ಟಿಕ್ ಕ್ಯಾನ್ ಗಳು ಕಂಡುಬಂದಿರುತ್ತದೆ. ಅದನ್ನು ಂಚರ ಸಮಾಕ್ಷಮ ಪರಿಶೀಲಿಸಿದಾಗ ಘಾಟು ವಾಸನೆಯಿುಂದ ಕೂಡದ ದ್ರುವ್ಯ ಕಂಡುಬರುತ್ತದೆ. ಅದನ್ನು ಕಳ್ಳಬಟ್ಟಿ ಎಂದು ಗುರುತಿಸಲಾಂಿತು. ಅಲ್ಲಿ 20 ಲೀ ಬಿಳಿ ಬಣ್ಣದ ಕ್ಯಾನಿನಲ್ಲಿ ಅಂದಾಜು 20 ಲೀ ನಷ್ಟು, 35 ಲೀ ಪ್ಲಾಸ್ಟಿಕ್ ಕ್ಯಾನ್ ನಲ್ಲಿ 25 ಲೀ ಕಳ್ಳಬಟ್ಟಿ ಸಾರಾಂಿ ಇರುವುದು ಕಂಡುಬರುತ್ತದೆ. ಒಟ್ಟು 45 ಲೀ ನಷ್ಟು ಕಳ್ಳಬಟ್ಟಿ ಸಾರಾಯಿ ಇರುವುದು ಕಂಡುಬರುತ್ತದೆ. ಅದರ ಪಕ್ಕದಲ್ಲಿ 50 ಲೀ ಗಾತ್ರದ ತಳಭಾಗ ಕಪ್ಪಾಗಿರುವ ಅಲ್ಯುಮಿನಿಯಂ ಹಂಡೆ 10 ಲೀ ಗಾತ್ರದ ಅಲ್ಯುಮಿನಿಯಂ ಪಾತ್ರೆ, ಒಳಗಡೆ ಅಲ್ಯುವಿನಿಯಂ ತಟ್ಟೆ ಇರುವ ಪಾತ್ರೆ, ಒಂದು ಕಪ್ಪು ಪೈಪ್ ಮತ್ತು ಬಿಳಿ ಬಣ್ಣದ ನಾಳಿಕೆ ಇರುವುದು ಕಂಡುಬರುತ್ತದೆ. ನಂತರ ಮನೆಯ ಸುತ್ತಮುತ್ತ ಪರಿಶೀಲಿಸಿದಾಗ ಮನೆಯ ಸೌದೆ ಕೊಟ್ಟಿಗೆಯಲ್ಲಿ 200 ಲೀ ಗಾತ್ರದ ನೀಲಿ ಬಣ್ಣದ ಪ್ಲಾಸ್ಟಿಕ್ ಡ್ರಂ ನಲ್ಲಿ 180 ಲೀ ಬೆಲ್ಲದ ಪುಳಗಂಜಿ ಇರುವುದು ಕಂಡುಬರುತ್ತದೆ. ನಂತರ ಕಳ್ಳಬಟ್ಟಿ ಸಾರಾಯಿಯಿಂದ 2 ಕ್ಯಾನ್ ನಲ್ಲಿ ತಲ 180 ಮಿಲಿಯ 2 ಗಾಜಿನ ಬಾಟಲ್ ಗಳಲ್ಲಿ ಮತ್ತು ಬೆಲ್ಲದ ಪುಳಗಂಜಿಂಿಂದ 180 ಮಿಲಿಯಷ್ಟು 1 ಗಾಜಿನ ಬಾಟಲ್ ನಷ್ಟು

ಮಾದರಿ ತೆಗೆದು ಬಿಳಿ ಬಟ್ಟೆಯಿಂದ ಸುತ್ತಿ ದಾರದಿಂದ ಕಟ್ಟಿ ಇಲಾಖಾ ಮೊಹರು ಸಂಖ್ಯೆ 424 ರಂತೆ ಸೀಲನ್ನು ಮಾಡಿ ಮಾದರಿ ಚೀಟಿಗಳನ್ನು ಅಂಟಿಸಲಾಯಿತು. ನಂತರ ಬೆಲ್ಲದ ಪುಳಗಂಜಿಯನ್ನು ಸಾಗಿಸಲು ಅನಾನುಕೂಲವಾದ ಕಾರಣ ಮಡಿಕೇರಿ ಅಬಕಾರಿ ಉಪಯುಕ್ತರವರಿಗೆ ಕರೆ ಮಾಡಿ ಆದೇಶದ ಮೇರೆಗೆ ಸ್ಥಳದಲ್ಲಿ ವೀಡಿಯೋ ಚಿತ್ರೀಕರಣ ಮಾಡಿಕೊಂಡು ನಾಶಮಾಡಲಾಯಿತು. ನಂತರ ಮಹಜರನ್ನು 4.15-5.20 ರವೆರೆಗ ಮಾಡಲಾಯಿತು. ಎಲ್ಲಾ ಪರಿಕರಗಳನ್ನು ವಶಕ್ಕ ಪಡೆದು ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಲಿಸಿಕೊಂಡು ಮಾನ್ಯ ನ್ಯಾಯಾಲಯಕ್ಕ ಸಲ್ಲಿಸಲಾಯಿತು. ನಂತರ ದಿಃ 28.08.2024 ರಲ್ಲಿ ಈ ಪ್ರಕರಣದ ಮೂಲ ಕಡತ ಮತ್ತು ಮುದ್ದೆ ಮಾಲುಗಳನ್ನು ಅಬಕಾರಿ ನಿರೀಕ್ಷಕರು ಚಾಸಾ 7 ರವರಿಗೆ ಹಸ್ತಾಂತರಿಸಲಾಂಿತು.

ದೂರನ್ನು ನಿಪಿ.1 , ಸಾಕ್ಷಿಯ  ಸಾಕ್ಷಿ ಸಹಿಯನ್ನು ನಿಪಿ-1(ಎ) ಎಂದು, ಎಫ್ ಐಆರ್ ನಿಪಿ.2,  ಶೋಧನಾ ಸಮಚ್ಚಿತ ಆಧಾರವನ್ನು ನಿಪಿ.3 ಎಂದು, ಸಾಕ್ಷಿಯ ಸಹಿಯನ್ನು ನಿಪಿ.3(ಎ), ಮಹಜರನ್ನು ನಿಪಿ.4 ಮತ್ತು ಸಾಕ್ಷಿಯ ಸಹಿ ನಿಪಿ 4(ಎ), ಮಾದರಿ ಮೊಹರನ್ನು ನಿಪಿ.5, ಮತ್ತು ತನ್ನ ಸಹಿಯನ್ನು ನಿಪಿ 5(ಎ), ಸ್ವತ್ತುಗಳ ಪಟ್ಟಿಯನ್ನು ನಿಪಿ 6 ಮತ್ತು ಸಾಕ್ಷಿಯ  ಸಹಿಯನ್ನು ನಿಪಿ 6(ಎ) ಎಂದು, ಫೋಟೋ ನಿಪಿ.7 ರಿಂದ 10 ಎಂದು, ಕಚೇರಿಯ ಚಲನಾವಲನ ಪುಸ್ತಕದ ದೃಢೀಕೃತ ನಕಲು ನಿಪಿ 11 ಎಂದು,  ಮಾದರಿಗಾಗಿ ತೆಗೆದ 180  ಮಿಲಿಯ ಕಳ್ಳಬಟ್ಟಿ ಸಾರಾಯಿ 2  ಗಾಜಿನ ಬಾಟಲ್ ನ್ನು  ಒಟ್ಟಾಗಿ ಎಂ.ಓ 1 ಎಂದು, 180 ಮಿಲಿಯ  1 ಗಾಜಿನ ಬಾಟಲ್ ನ್ ಬೆಲ್ಲದ ಪುಳಗಂಜಿಯನ್ನು ಎಂ.ಓ 2 ಎಂದು ಗುರುತಿಸಲಾಯಿತು,  ಆರೋಪಿಯನ್ನು ನೋಡಿ ಗುರುತಿಸುತ್ತೇನೆ.

<u>ಪಾಟೀ ಸವಾಲುಃ ಶ್ರೀ.ಕೆ.ಎಸ್. ಪಿ    ವಕೀಲರಿಂದ:</u>

ಚಾಸಾ 2 ರವರನ್ನು ಅಬಕಾರಿ ಉಪ ಅಧೀಕ್ಷಕರು ಗೌಪ್ಯ  ಮಾಹಿತಿಗಾಗಿ ಲಿಖಿತ ಬರವಣಿಗೆಯ ಆದೇಶದ ಮುಖಾಂತರ ನೇಮಕ ಮಾಡಿರುತ್ತಾರೆ. ನಮ್ಮಲ್ಲಿ ಇಲಾಖಾ ಲಾಗ್ ಪುಸ್ತಕ ಇರುತ್ತದೆ.  ಚಾಸಾ 2 ರವರು ಗಸ್ತಿಗೆ ಹೋಗಿರುವಂತಹ ನಮ್ಮ ಇಲಾಖಾ ಲಾಗ್  ಪುಸ್ತಕದಲ್ಲಿ ನಮೂದು ಮಾಡಿರುತ್ತೇವೆ. ಹಾಗೂ ಇಲಾಖಾ ಚಲನವಲನ ಪುಸ್ತಕ ಇದೆ. ಅದರಲ್ಲಿ ಕೂಡಾ ಚಾಸಾ 2 ರವರು ಗಸ್ತಿಗೆ ಹೋದ ಬಗ್ಗೆ ನಮೂದು ಮಾಡಿರುತ್ತೇವೆ. ಚಲನಾವಲನ ಪುಸ್ತಕದಲ್ಲಿ ಎಷ್ಟು  ಸಮಯಕ್ ಕ್ಷಹೋಗುತ್ತಾರೆ

ಎಂಬುದರ ಬಗ್ಗೆ ನಮೂದು ಮಾಡುತ್ತಾರೆ ಎಂದರೆ ಸರಿ. ಚಾಸಾ 2 ರವರು ಘಟನೆ ನಡೆದ ಎಷ್ಟು ಗಂಟೆಗೆ ನಮ್ಮ ಕಚೇರಿ ಬಿಟ್ಟಿರುತ್ತರೆ ಎಂಬುದರ ಬಗ್ಗೆ ನಮಗೆ ನೆನಪಿರುವುದಿಲ್ಲ. ನಿಪಿ 11 ರಲ್ಲಿ ಸಮಯ ನಮೂದು ಮಾಡಿರುವುದಿಲ್ಲ ಎಂದರೆ ಸರಿ. ನಿಪಿ 11 ರಲ್ಲಿ ದಿಃ07.08.2024 ಆದ ನಂತರ ದಿಃ 01.08.2024 ಎಂದು ನಮೂದು ಮಾಡಿರುತ್ತಾರೆ ಎಂದರೆ ಸಾಕ್ಷಿಯು ಪುಟ ಆಕಡೆ ಈಕಡೆ ಆಗಿರುತ್ತದೆ ಎಂದು ನುಡಿದಿರುತ್ತಾರೆ. ಚಾಸಾ 2 ರವರು ನನಗೆ ಗೋಣಿ ಮರೂರಿನಲ್ಲಿ ಸಮಯ ಮದ್ಯಾಹ್ನ 3.30 ಗೆ ಕೊಟ್ಟಿರುತ್ತಾರೆ. ಆಗ ನಾನು ಯಾವುದೇ ಸೀಲನ್ನು ತೆಗೆದುಕೊಂಡು ಹೋಗಿರುವುದಿಲ್ಲ. ಕ್ರೈಂ ನಂಬರ್ ಬಗ್ಗೆ ಮಾಹಿತಿ ಇರುತ್ತದೆ. ದೂರಿನಲ್ಲಿ ಮತ್ತು ಮಹಜರ್ ನಲ್ಲಿ ಕ್ರೈಂ ನಂಬರ್ ನಮೂದು ಮಾಡಿರುವುದಿಲ್ಲ. ಆರೋಪಿಯ ಮನೆಯ ಪಕ್ಕದಲ್ಲಿ ವೆಂಕಟೇಶ್ ಲಿಂಗಪ್ಪ ಕುಮಾರವರ ಮನೆ ಇರುತ್ತದೆ ಎಂದರೆ ಸಾಕ್ಷಿ ಯು ಮನೆಯು ದೂರ ದೂರ ಇರುತ್ತದೆ ಎಂದು ನುಡಿಯುತ್ತಾರೆ. ಮಹಜರ್ ಸಮಯದಲ್ಲಿ ಸ್ಥಳೀಯ ಸಾಕ್ಷಿದಾರರು ಇರುವುದಿಲ್ಲ ಎಂದರೆ ಸರಿ. ಆರೋಪಿಯ ಮನೆಯಲ್ಲಿ ಘಟನೆ ದಿನ ಆರೋಪಿಯನ್ನು ಹೊರತುಪಡಿಸಿ ಯಾರೂ ಇರುವುದಿಲ್ಲ. ನಿಪಿ 7 ರಿಂದ 10 ಛಾಯಾಚಿತ್ರದಲ್ಲಿ ಅಮಾನತುಪಡಿಸಿಕೊಂಡಿರುವಂತಹ ಪಾತ್ರೆ ಮತ್ತು ಕ್ಯಾನ್ ನ ಮೇಲೆ ಮಹಜರ್ ದಾರರು ಸಹಿ ಮಾಡಿರುವಂತಹ ಚೀಟಿ ಕಾಣಿಸುವುದಿಲ್ಲ ಎಂದರೆ ಸರಿ. ಆರೋಪಿಗೂ ಮತ್ತು ಮುದ್ದೆ ಮಾಲುಗಳಿಗೂ ಯಾವುದೇ ಸಂಬಧ ಇರುವುದಿಲ್ಲ ೃಂದರೆ ಸರಿಯಲ್ಲ. ಮತ್ತು ಸ್ಥಳದಲ್ಲಿ ಯಾವುದೇ ಮಹಜರ್ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ 2 ರವರಿಂದ ಸುಳ್ಳು ದೂರನ್ನು ಪಡೆದು ಸುಳ್ಳು ಪ್ರಥಮ ವರ್ತಮಾನ ವರದಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸರಿ ಇದೆ.

ಸಹಿ/-

ಸಿ.ಜೆ.ಮತ್ತು ಪ್ರ.ದ.ನ್ಯಾ .ದಂ

ಸೋಮವಾರಪೇಟೆ